ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

ಸೆಷನ್ಸ್ ಕೇಸ್ ನಂಬ್ರ **76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಕೇಶವ್ | ಪ್ರಾಸಾಃ 2 |
| ತಂದೆಯ ಹೆಸರು | : | ಕೋರಗಪ್ಪ | ಚಾಸಾಃ 6 |
| ಪ್ರಾಯ | : | 42 ವರ್ಷ | **ದಿನಾಂಕಃ 13.11.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಎಕ್ಕಾರು, ತೆಂಕೆ ಎಕ್ಕಾರು ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಚಾ.ಸಾ.2 ಮತ್ತು ಚಾ.ಸಾ.8 ರಿಂದ ಚಾ.ಸಾ.12 ರವರ ಪರಿಚಯ ಇದ್ದು ಅವರು ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಸಾಕ್ಷಿ ಗುರುತಿಸುತ್ತಾರೆ. ಈ ಪ್ರಕರಣದ ಮೃತ ಸರಿತಾ ಅವರ ಪರಿಚಯ ಇದೆ, ಅವರು ಆರೋಪಿಯಎ ಹೆಂಡತಿ. ಚಾ.ಸಾ.4 ರಾಹುಲ ಆರೋಪಿ ಹಾಗೂ ಮೃತ ಸರಿತಾಳ ಮಗ .

2. ಆರೋಪಿ ಮತ್ತು ಮೃತ ಸರಿತಾ ಮತ್ತು ಚಾ.ಸಾ.4, ಚಾ.ಸಾ.12 ರವರಿಗೆ ಸೇರಿದ ತೆಂಕೆ ಎಕ್ಕಾರು ಗ್ರಾಮಾದ ಪಲ್ಲದ ಕೋಡಿಯಲ್ಲಿಯ ಜಾಗದಲ್ಲಿ ಇದ್ದ ಶೆಡ್ಡನಲ್ಲಿ ವಾಸವಾಗಿದ್ದರು. ದಿನಾಂಕಃ 28.11.2022 ರಂದು ನಾನು ಬೆಳಿಗ್ಗೆ ಕೆಲಸಕ್ಕೆ ಹೋಗುವಾಗ, ಸದ್ರಿ ಆರೋಪಿ ಶೆಡ್ ಮುಂದೆಯಿಂದ ಹೋಗುತ್ತಿದ್ದೆ, ಅಲ್ಲಿ ಜನರು ಆರೋಪಿ ಹೆಂಡತಿ ಕೋಲೆ ಆಗಿದೆ ಎಂದು ಮಾತನಾಡುತ್ತಿದ್ದರು, ಆಗ ನಾನು ಆರೋಪಿ ಮನೆಗೆ ಹೋದೆ. ಒಳಗೆ ಹೋಗಿ ನೋಡಲಾಗಿ ಅದು ಸರಿತಾಳ ಮೃತದೇಹ ಅಂಗಾತ ಮಲಗಿದ್ದು ಮೈಮೇಲೆ ಪ್ಯಾಂಟ್ ಮಾತ್ರ ಇತ್ತು. ಆಕೆಯ ಮೈಮೇಲೆ ರಕ್ತ ಗಾಯ ಇತ್ತು, ಎಡಗಡೆ ಕಣ್ಣಿಣ ಹತ್ತಿರ ಗಾಯ ಇತ್ತು. ಅಲ್ಲೇ ಇದ್ದ ಚಾ.ಸಾ.2 ಮತ್ತು ಚಾ.ಸಾ.3 ರವರನ್ನು ವಿಚಾರಿಸಲಾಗಿ ಅವರು

ಹೇಳಿದ್ದು ಏನೆಂದರೇ, ಹಿಂದಿನ ದಿನಾಂಕಃ 27.11.2022 ರಂದು ಆರೋಪಿ ಕುಡಿದು ಬಂದು ರಾತ್ರಿ 8.30 ಕ್ಕೆ ಆರೋಪಿ ಸರಿತಾಳೊಂದಿಗೆ ಜಗಳ ಮಾಡಿ ಹೋಡೆದಿರುತ್ತಾರೆ. ನಂತರ ಚಾ.ಸಾ.2 ಮತ್ತು ಚಾ.ಸಾ.3 ರವರು ಇವರ ಜಗಳವನ್ನು ಬಿಡಿಸಿ, ಸಮಾಧಾನ ಮಾಡಿ ಆಕೆಗೆ ಗಾಯವಾದ ಕಾರಣ ಚಿಕಿತ್ಸೆ ಕೊಡಿಸಲು ಹೇಳಿರುತ್ತಾರೆ. ನಂತರ ಬೆಳಿಗ್ಗೆ ಹೋಗಿ ನೋಡಿದಾಗ ಘಟಣೆ ಆಗಿದೆ ಎಂದು ತಿಳಿಸಿದರು.

3. ಆರೋಪಿ ರೀಪ್ ಮತ್ತು ಮರದ ಹಲಗೆಯ ತುಂಡಿನಿಂದ ತನ್ನ ಹೆಂಡತಿಗೆ ಹಲ್ಲೆ ನಡೆಸಿ ಆಕೆಯನ್ನು ಕೋಲೆ ಮಾಡಿದ್ದಾನೆ ಎಂದು ತಿಳಿದುಬಂತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೋಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ-</u>

4. ನಮ್ಮ ಮನೆಯಿಂದ ಆರೋಪಿ ವಾಸ ಮಾಡುತ್ತಿದ್ದ ಶೆಡ್ಡು 700 ಮೀಟರ ಅಂತರದಲ್ಲಿದೆ. ಆರೋಪಿ ಮತ್ತು ಆತನ ಹೆಂಡತಿ ಏನು ಕೆಲಸ ಮಾಡುತ್ತಾರೆ ಮತ್ತು ಎಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ವಾಸಾ ಮಾಡುತ್ತಿದ್ದ ಶೆಡ್ಡು ಮತ್ತು ಚಾ.ಸಾ.12 ರವರ ಮನೆಯಿಂದ ತುಂಬಾ ದೂರ ಇದೆ, ಎಷ್ಟು ದೂರ ಎಂದು ನಿಖರವಾಗಿ ಗೊತ್ತಿಲ್ಲ. ಆರೋಪಿ ವಾಸಾ ಮಾಡುತ್ತಿದ್ದ ಶೆಡ್ಡನಿಂದ ಸ್ವಲ್ಪ ದೂರದಲ್ಲಿ 2, 3 ಮನೆಗಳು ಇವೆ.

5. ನಾನು ಆರೋಪಿಯ ಶೆಡ್ಡ ಮುಂದೆ ಹೋಗುವಾಗಲೆಲ್ಲ ಗಂಡಾ ಹೆಂಡತಿ ಜಗಳ ಮಾಡುತ್ತಾ ಇರುತ್ತಿದ್ದರು ಮತ್ತು ಅಕ್ಕಪಕ್ಕದವರಿಗೆ ಅವರ ಜಗಳದಿಂದ ತೊಂದರೆ ಆಗುತ್ತಿತ್ತು. ಮೃತ ಸರಿತಾಳಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಆತನ ಹೆಂಡತಿ ಮೇಲೆ ಊರಿನ ಜನ ದೂರು ಕೊಟ್ಟಿದ್ದಾರೋ ಇಲ್ಲವೋ

ಎಂದು ನನಗೆ ಗೊತ್ತಿಲ್ಲ. ಮೃತ ಸರಿತಾಳಿಗೆ ಕುಡಿಯುವ ಅಭ್ಯಾಸ ಇತ್ತು ಮತ್ತು ಆಕೆ ಕುಡಿದು ಗಂಡನ ಮೇಲೆ ಹಲ್ಲೆ ಮಡುತ್ತಾ ಇದ್ದಳು ಅಂದರೆ ನನಗೆ ಗೊತ್ತಿಲ್ಲ. ಹಾಗೆ ಗಂಡನಿಗೆ ಹೋಡೆಯುವಾಗ, ಊರಿನ ಜನ ಬಿಡಿಸಲು ಬಂದಾಗ ಅವರ ಮೇಲೂ ಹಲ್ಲೆ ಮಾಡಿ, ಜನ ದೂರು ನೀಡಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಮೃತ ಸರಿತಾಳ ಮೇಲೆ ಊರಿನವರು ದೂರು ಕೊಟ್ಟ ಬಗ್ಗೆ ನನಗೆ ಏನೂ ಗೊತ್ತಿಲ್ಲ.

6. ಮೃತಳಿಗೆ ಕೋಳಿ ಕಳ್ಳತನ ಮಾಡುವುದು, ಅಡಿಕೆ ಕಳ್ಳನ ಮಾಡುವುದು ಮತ್ತು ತರಕಾರಿ ಕಳ್ಳತನ ಮಾಡುವ ಅಭ್ಯಾಸ ಇದ್ದ ಕಾರಣ ಊರಿನವರು ಮೌಖಿಕವಾಗಿ ದೂರು ಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ. ಈ ಕಾರಣದಿಂದ ಸರಿತಾಳಿಗೆ ಊರಿನಲ್ಲಿ ತುಂಬಾ ಜನ ವೈರಿಗಳು ಇದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಆರೋಪಿ ವಾಸಾ ಮಾಡುತ್ತಿದ್ದ ಶೆಡ್ಡ ಪಕ್ಕದಲ್ಲಿ ತಗ್ಗು ಪ್ರದೇಶ ಇದೆ ಎಂದರೆ ಸರಿಯಲ್ಲ. ಮೃತ ಸರಿತಾಳ ಶವ ತಗ್ಗು ಪ್ರದೇಶದಲ್ಲಿ ಬಿದ್ದುಕೊಂಡಿದ್ದನ್ನು ನಾನು ನೋಡಿದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ, ನಾನು ಮೃತ ದೇಹವನ್ನು ಶೆಡ್ಡಿನ ಒಳಗೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ಮೃತ ಸರಿತಾ ಮಧ್ಯಪಾನ ಮಾಡಿ ಅಮಲಿನಲ್ಲಿ ತಗ್ಗು ಪ್ರದೇಶದಲ್ಲಿ ಬಿದ್ದು ಗಾಯಮಾಡಿಕೊಂಡ ನಂತರ ನಾನು ಮತ್ತು ಆರೋಪಿ ಹೋಗಿ ಆಕೆಯನ್ನು ಶೆಡ್ಡ ಒಳಗೆ ತಂದು ಮಲಗಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಘಟನೆ ದಿನ ತನ್ನ ಹೆಂಡತಿಗೆ ಜಗಳ ಮಾಡಿಲ್ಲ ಮತ್ತು ಹೊಡೆದಿಲ್ಲ ಎಂದರೆ ಸರಿಯಲ್ಲ. ಅಲ್ಲಿದ್ದ ಜನರಿಗೆ ಆರೋಪಿಯನ್ನು ಆ ಮನೆಯಿಂದ ಹೋರಹಾಕಬೇಕು ಎನ್ನುವ ಮನಸ್ಸು ಇತ್ತು ಎಂದರೆ ಸರಿಯಲ್ಲ. ಹಾಗಾಗಿ ಆರೋಪಿ ಮೇಲೆ ತನ್ನ ಹೆಂಡತಿ ತಾನೆ ಬಿದ್ದು ಗಾಯ ಮಾಡಿಕೊಂಡಿದ್ದು ಸಹ ಸುಳ್ಳು ಆರೋಪ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ಹೆಪಿಂಡತಿ ಸತ್ತ ಬಳಿಕ ಆರೋಪಿ ಜೈಲಿನಲ್ಲಿ ಇರಲಿ ಎನ್ನುವ ಉದ್ದೇಶದಿಂದ ಸುಳ್ಳು ಆರೋಪ ಹೋರೆಸಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಪ್ರಕರಣಕ್ಕೂ

ಈ ಆರೋಪಿಗು ಒಂದಕ್ಕೊಂದು ಸಂಬಂಧ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

**ದಿನಾಂಕಃ 29.08.2024** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಜಿ.ವಿ.ಜಿ. ವಕೀಲರಿಂದಃ-

5. ನಾನು ಘಟನೆ ದಿನ ಅಲ್ಲದೇ ಅದಕ್ಕಿಂತ ಎರಡು ತಿಂಗಳ ಹಿಂದೆ ಅಕ್ಕನ ಮನೆಗೆ ಹೋಗಿದ್ದೆ. ನನ್ನ ಅಕ್ಕನ ಮನೆಯ ಪಕ್ಕದಲ್ಲಿ ಚಾ.ಸಾ.2 ಮತ್ತು ಚಾ.ಸಾ.3ರವರ ಮನೆಗಳಿವೆ ನಂತರ ಉಳಿದ ಮನೆಗಳು ಸ್ವಲ್ಪ ದೂರದಲ್ಲಿವೆ. ನನ್ನ ಅಕ್ಕನ ಮನೆಗೆ ಹೋದಾಗ ನಾನು ಚಾ.ಸಾ.2 ಮತ್ತು ಚಾ.ಸಾ.3ರವರೊಡನೆ ಮಾತನಾಡಿ ಬರುತ್ತೇನೆ. ಸದರಿಯವರ ಫೋನ್ ನಂಬರ್ ಗೊತ್ತಿದೆ.

6. ನಾನು ಅಕ್ಕನ ಮನೆಗೆ ಹೋಗುವಾಗ 4 ಜನ ಪೊಲೀಸರು ಮತ್ತು ಊರಿನವರು ಇದ್ದರು. ಪೊಲೀಸರಿಗೆ ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ

ಗೊತ್ತಿಲ್ಲ. ಆಗ ಸ್ಥಳದಲ್ಲಿ ಆರೋಪಿ ಇರಲಿಲ್ಲ. ನನ್ನ ಅಕ್ಕ ವಾಸ ಮಾಡುತ್ತಿದ್ದ ಶೆಡ್, ಕಪ್ಪು ಕಲ್ಲಿನ ಕೋರೆಯ ಪಕ್ಕದಲ್ಲಿ ಇತ್ತು. ನಾನು ಅಕ್ಕನ ಮನೆಗೆ ಹೋದಾಗ ಚಾ.ಸಾ.4 ಮನೆಯಲ್ಲಿದ್ದ. ನಾನು ಪೊಲೀಸರಿಗೆ ದೂರು ನೀಡಿಲ್ಲ ಮತ್ತು ದೂರು ನೀಡಿದವರು ಯಾರು ಅಂತ ಗೊತ್ತಿಲ್ಲ. ಅಕ್ಕನ ಮನೆಯಿಂದ ನಾನು ಆಸ್ಪತ್ರೆಗೆ ಹೋಗಿ ನಂತರ ನಮ್ಮ ಮನೆಗೆ ಹಿಂತಿರುಗಿರುತ್ತೇನೆ.

7. ಆರೋಪಿ ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದರು. ನನ್ನ ಅಕ್ಕ ಮನೆಯಲ್ಲಿರುತ್ತಿದ್ದಳು. ನನ್ನ ಅಕ್ಕ ಕಲ್ಲಿನ ಕೋರೆಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅಕ್ಕ ಕಲ್ಲಿನ ಕೋರೆಯಲ್ಲಿ ಕೆಲಸ ಮಾಡುವ ಕಾಲಕ್ಕೆ ಆಕೆ ಜಾರಿ ಬಿದ್ದು, ಮೈಕೈಗೆ ಗಾಯ ಆಗಿ ಆಕೆ ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ. ನನ್ನ ಅಕ್ಕ ಕೆಲಸ ಮಾಡುವ ವೇಳೆ ಬಿದ್ದು ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿದ್ದು ಕೇಳಿದೆ, ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.